ಎಂ.ಎಸ್. ಲೀಲಾವತಿ, ಬೆಂಗಳೂರು

ರಾಜಕಾರಣಿಗಳೆಲ್ಲಾ ಟಿವಿ ಚಾನೆಲ್‌ಗಳನ್ನು ಕೊಳ್ಳಲು ದುಂಬಾಲು ಬೀಳುತ್ತಿರುವುದರ ಮರ್ಮವೇನು?



‘ಸಮಯ’ ಸಿಕ್ಕಾಗ ‘ಕಸ್ತೂರಿ’ಯ ಗಂಧ ಬೀರುತ್ತೇವೆನ್ನುತಾ ‘ಶ್ರೀ’ಜನಸಾಮಾನ್ಯನಿಗೆ ದುರ್ಗಂಧ ಬೀರುವ ಹುನ್ನಾರ!

ಬಿ.ಎಸ್. ಮಳ್ಳೂರ, ಹಲಗತ್ತಿ

ಹೆಣ್ಣಿನ ವಯಸ್ಸು ಕೇಳಬಾರದು, ಗಂಡಿನ ಪಗಾರ ಕೇಳಬಾರದು; ತಮ್ಮನ್ನು ಏನು ಕೇಳಬಾರದು?

ಏನು ಬೇಕಾದರೂ ಕೇಳಿ; ನಾನಂತೂ ನಿಮಗೆ ನಿಜ ಹೇಳುವುದಿಲ್ಲವೆಂದು ಆಶ್ವಾಸನೆ ನೀಡುತ್ತೇನೆ!

ಹೆಚ್.ಆರ್. ಕಡಿವಾಲ, ಬದಾಮಿ

ಹನಿಮೂನ್‌ಗೆ ಊಟಿ, ಚಿರಾಪುಂಜಿಗಳಿಗೆ ಹೋಗಲು ಕಾರಣವೇನು?

ನಾಚಿದರೆ ಊಟಿ ಆಪಲ್, ಅತ್ತರೆ ಚಿರಾಪುಂಜಿಯನ್ನು, ಹೋಲುವಳೋ ಇಲ್ಲವೋ ಎಂದು ಹೋಲಿಸಿ ತಿಳಿಯಲು!

ಎಚ್.ಆರ್. ದೇಸಾಯಿ, ರಾಯಚೂರು

ಸಾಯಲು ಬಿಡದ ವೈದ್ಯ, ಬದುಕಲು ಬಿಡದ ಯಮ; ರೋಗಿ ಯಾವ ಪಕ್ಷ ಹಿಡಿಯಬೇಕು?

ಶೀಘ್ರವೇ ಔಷಧಸೇವನೆ ನಿಲ್ಲಿಸಿಬಿಡಿ; ರೋಗ ಗುಣವಾಗಿ ವೈದ್ಯ, ಯಮ ಇಬ್ಬರೂ ದೂರವಾಗುತ್ತಾರೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

‘ತ್ರಿಶಂಕು’ಸ್ಥಿತಿ ಎಂದರೇನು?



ಒಂದೇ ಕಟ್ಟಡಕ್ಕೆ ಮೂರನೆಯ ಬಾರಿ ಶಂಕುಸ್ಥಾಪನೆಯಾಗುವುದೇ ತ್ರಿಶಂಕು ಸ್ಥಿತಿ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

ಮನುಷ್ಯನಿಗೆ ‘ಅನಾಥಪ್ರಜ್ಞೆ’ ಕಾಡುವುದು ಯಾವಾಗ?

ಆತ್ಮಸ್ಥೈರ್ಯ, ವಿವೇಕ ಕೈಕೊಟ್ಟಾಗ.

ಎಂ.ಬಿ. ಖೋದಾನಪುರ, ಸವದತ್ತಿ

ವೇಶ್ಯೆಯಾದವಳು ಗರ್ಭಿಣಿಯಾದರೆ ಯಾರು ಹೊಣೆ?

ವಯಸ್ಸಾಗಿ ನಿವೃತ್ತರಾಗಿರುವ ನೀವಂತೂ ಅಲ್ಲ ಎಂದು ನಂಬಲೆ?

ಆರ್. ಮಧುಸೂದನ್, ಹಾಸನ

ಕುಡುಕ ಗಂಡನನ್ನೂ ಪ್ರೀತಿಸುವ ಹೆಣ್ಣು ಸಿಡುಕ ಗಂಡನನ್ನು ದ್ವೇಷಿಸುವುದೇಕೆ?

ಸಿಡುಕನ ತಲೆಯಮೇಲೆ ನೀರು ಸುರಿದರೆ ಅವನು ಸುಮ್ಮನಾಗುವುದಿಲ್ಲವಲ್ಲ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಐ ಕ್ಯಾಂಪಸ್

ಲ್ಯಾಪ್ ಮೇಲೆ ಒಬ್ಬಳನ್ನು, ಟಾಪ್ ಮೇಲೆ ಒಬ್ಬಳನ್ನು ಹೊಂದಿರುವ ಶಿವನನ್ನು ಲ್ಯಾಪ್‌ಟಾಪ್ ಅನ್ನಬಹುದೆ?

ಗಣೇಶನ ಇಲಿಯೂ ಬೇಕಾದಾಗ ಸಿಗುವುದರಿಂದ ಲ್ಯಾಪ್‌ಟಾಪ್ ವಿತ್ ಎಕ್ಸ್‌ಟರ್ನಲ್ ಮೌಸ್ ಎನ್ನಬಹುದು!

ಕಂಡಕ್ಟರ್ ರಾಜು, ಗುಬ್ಬಿ

ಮದುವೆಯಾಗಿದ್ದರೆ ಶ್ರೀಮತಿ, ಆಗಿಲ್ಲದಿದ್ದರೆ ಕುಮಾರಿ. ಇದರ ಅರ್ಥವೇನು?

ಸುಕುಮಾರರು ಸುಳಿದಾಡುವಂತೆ ಮಾಡುವವಳು ಕುಮಾರಿ; ಶ್ರೀ(ಗಂಡ)ಯಿಂದ ಮತಿ ಉಪಯೋಗಿಸಿ ಹಣ ಪಡೆಯುವವಳು ಶ್ರೀಮತಿ!

ಮಹಾವೀರ ಕಾಸಾರ, ಶಿವಮೊಗ್ಗ

ಕಲಿಯುಗದಲ್ಲಿ ಗುರು ಶಿಷ್ಯನಿಗೆ ಹೇಗೆ ವಿದ್ಯೆ ಕಲಿಸಬೇಕು?

ಭಯ, ಭಕ್ತಿಯಿಂದ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ

ಸಂಕಟ ಬಂದಾಗ ವೆಂಕಟರಮಣ; ಸಿಕ್ಕಾಪಟ್ಟೆ ದುಡ್ಡು ಬಂದಾಗ?

ಸ್ವಿಸ್ ಬ್ಯಾಂಕ್‌ನತ್ತ ಪಯಣ!

ಆನಂದ್ ಕುಮಾರ್, ಚಿತ್ರದುರ್ಗ

ಸಾವಿರ ದಿನಗಳ ಸರದಾರ ಮುಖ್ಯಮಂತ್ರಿಗೆ ನಿಮ್ಮ ಸಲಹಾ ‘ಮುತ್ತು’ಗಳುಂಟೇ?

ಮುಂದಾದರೂ heap ಆಗದೆ hief ಆಗಿರಿ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

ಸತ್ಯ ಹರಿಶ್ಚಂದ್ರ ಈಗ ಜನ್ಮತಾಳಿದರೆ ಸತ್ಯವನ್ನೇ ನುಡಿಯಬಹುದೆ?

ಖಂಡಿತ ಸಾಧ್ಯ; ಸುಳ್ಳಾಡಬೇಕಾದಾಗಲೆಲ್ಲಾ ವಕೀಲರನ್ನು ನೇಮಿಸಿಕೊಂಡರಾಯಿತು!

ನರಸಿಂಹ ಎಂ. ಪೈ, ಹೊನ್ನಾವರ

ಭಾರತದಲ್ಲಿ ಭ್ರಷ್ಟಾಚಾರವೆಂಬ ‘ಭಸ್ಮಾಸುರ’ ಬೆಳೆಯಲು ಕಾರಣ?

ದುರಾಸೆಯ ಮೋಹಿನಿಯಾಟ್ಟಂ!

## ಬಹುಮಾನಿತ ಪ್ರಶ್ನೆ

ಎಂ.ಎಸ್. ಸೋಮಶೇಖರ್, ವಿದ್ಯಾರಣ್ಯಪುರಂ, ಮೈಸೂರು

ಭೂತ, ಪ್ರೇತಗಳು ಪವಿತ್ರವಾದ ಭೂಮಿಯ ಮೇಲೆ ಹೇಗೆ ಇರಬಲ್ಲವು?

‘ಸುಖ, ಸಂತೋಷ ಮತ್ತು ನೆಮ್ಮದಿಯಿಂದ’ ಎಂದನೊಬ್ಬ ಮಲೆಯಾಳಿ ಮಾಂತ್ರಿಕ.

ನೇ.ಗೋ.ಭ, ಕುಕ್ಕೆ ಸುಬ್ರಮಣ್ಯ

‘ಓದುಗರ ಪ್ರಶ್ನೆಗೆ ಉತ್ತರಿಸುತ್ತೀರಿ’ ನನಗೆ ಚಿನ್ನದ ಸರ ಯಾವಾಗ ಕೊಡುತ್ತೀರಿ? ಎಂಬುದಕ್ಕೆ ಉತ್ತರಿಸಿರೆಂದು ಪತ್ನಿ ಕೇಳಿದರೆ?

‘ಸರ ಮುಖ್ಯವಲ್ಲ ಪ್ರಿಯೆ, ಸರಸ ಮುಖ್ಯ?’ ಎನ್ನುತ್ತೇನೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು

ಬಾಲ್ಯ, ಯವ್ವನ ಹಾಗೂ ವೃದ್ಧಾಪ್ಯಗಳಲ್ಲಿ ಯವ್ವನವನ್ನೇ ಬಯಸುವುದರ ಕಾರಣ?

ಅಲ್ಲಿ ಹಿರಿಯರ ಅಂಕೆಯಿಲ್ಲ, ಸಾವಿನ ಶಂಕೆಯಿಲ್ಲದ್ದರಿಂದ!

ಎಂ.ಜಿ. ನೇಹವರ್ಷಿನಿ, ಬಳ್ಳಾರಿ

ದೇವರೇ ತನ್ನ ಹುಂಡಿಯನ್ನು ಕದ್ದರೆ?

ಪೂಜಾರಿ ಷೋ ಕಾಸ್ ನೋಟೀಸ್ ಕಳುಹಿಸುತ್ತಾನಂತೆ!

ಜಾಕೋಬ್ ಡಿಸೋಜ, ಕುರುವಳ್ಳಿ

ಅಂದಿನ ಮುಖ್ಯಮಂತ್ರಿಗಳಿಗೂ, ಇಂದಿನ ಮುಖ್ಯಮಂತ್ರಿಗಳಿಗೂ ಏನು ವ್ಯತ್ಯಾಸ?

ಅವರು ಹಳೇ ಮಡಕೆ, ಇವರು ಹೊಸ ಮಡಕೆ. ಹೊಸ ಮಡಕೆಯಲ್ಲಿ ಹೀರುವಿಕೆ ಹೆಚ್ಚು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಎರಡಕ್ಷರದ ‘ಪ್ರೀತಿ’ಯ ಮಹಿಮೆ ತಿಳಿಸಿ?

ಅದರಿಂದಲೇ ರೀತಿ, ನೀತಿ; ಅದರಿಂದಲೇ




ವರನಾಗುವವನು ಕೋತಿ. ಅದಿಲ್ಲದಿದ್ದರೆ ಬರೀ ರೋತಿ, ಫಜೀತಿ!

■ ರಾಮ್